ಮ್ಯಾನೇಜ್‌ಮೆಂಟ್ ಸೀಟ್ ಕೊಡ್ಸಿದೀನಿ. ಇವನು ನೋಡಿದ್ರೆ ಮೊದಲನೇ ವರ್ಷದಲ್ಲಿ ಎಂಟು ಸಬ್ಜೆಕ್ಟ್ ಪಾಸೇ ಆಗಿಲ್ಲ. ಎಷ್ಟು ಬುದ್ಧಿವಾದ ಹೇಳಿದ್ರೂ ಕೇಳ್ತಾ ಇಲ್ಲ. ಬೈದರೆ ಎಂಜಿನಿಯರಿಂಗ್ ಬಿಟ್ಟುಬಿಡ್ತೀನಿ ಅಂತ ಹೆದರಿಸ್ತಾನೆ' ಎಂದು ತಮ್ಮ ಅಳಲನ್ನು ತೋಡಿಕೊಂಡಿದ್ದರು. ಕೌನ್ಸೆಲಿಂಗ್‌ಗೆ ಬಂದ ಮಗನನ್ನು ವಿಚಾರಿಸಿದರೆ, 'ನಂಗೆ ಸೈನ್ಸ್ ತಲೆಗೆ ಹೋಗಲ್ಲ. ಬೇಡ ಬೇಡ ಅಂದ್ರು ಎಂಜಿನಿಯರಿಂಗ್ ಸೇರಿಸಿ ಹಿಂಸೆ ಮಾಡ್ತಾ ಇದಾರೆ. ನಾನು ಹೋಟೆಲ್ ಮ್ಯಾನೇಜ್‌ಮೆಂಟ್ ಮಾಡಿ ಅದನ್ನೇ ಕರಿಯರ್ ಮಾಡ್ಕೋತೀನಿ ಅಂತ ಎಷ್ಟು ಹೇಳಿದ್ರೂ, ಅದೂ ಒಂದು ಡಿಗ್ರೀನಾ, ಅಡುಗೆ ಕೆಲಸಕ್ಕೆ ಡಿಗ್ರಿ ಬೇರೆ ಕೇಡು ಅಂತೆಲ್ಲ ಬೈದು ಹೀಯಾಳಿಸಿದ್ರು' ಎಂದು ಮಗ ತನ್ನ ನೋವನ್ನು, ಅಸಹಾಯಕತೆಯನ್ನು ತೋಡಿಕೊಂಡಿದ್ದ.

ಮಕ್ಕಳ ವಿದ್ಯಾಭಾಸವನ್ನು ಅವರ ಕೌಶಲಗಳು, ಬುದ್ಧಿಮತ್ತೆ ಹಾಗೂ ಅವರ ಆಸಕ್ತಿಯನ್ನು ನೋಡಿ ನಿರ್ಧರಿಸಬೇಕೇ ಹೊರತು ಯಾವ ಕೆಲಸ ಸಿಕ್ಕಿದರೆ ಹೆಚ್ಚು ಸಂಬಳ ಬರತ್ತೆ, ಅದಕ್ಕೆ ಯಾವ ಕೋರ್ಸ್ ಸೇರಬೇಕೆಂದೋ, ನಾನು ಡಾಕ್ಟರ್ ಅದಕ್ಕೆ ಮಗನೂ ಡಾಕ್ಟರ್ ಆಗಬೇಕೆಂದೋ, ಮನೇಲಿ ಎಲ್ಲರೂ ಎಂಜಿನಿಯರಿಂಗ್ ಮಾಡಿದ್ದಾರೆ, ಇದಕ್ಕಿಂತ ಕಮ್ಮಿ ಓದಿದರೆ ಸಂಬಂಧಿಕರು ಆಡಿಕೊಳ್ಳೋಲ್ಲವೇ ಎಂಬ ಹೆದರಿಕೆಯಿಂದಲೋ ಮಕ್ಕಳ ವಿದ್ಯಾಭ್ಯಾಸದ ಭವಿಷ್ಯವನ್ನು ನಿರ್ಧರಿಸಿದರೆ, ಮುಂದೆ ಕಷ್ಟ ಕಟ್ಟಿಟ್ಟ ಬುತ್ತಿ.

ಆದರೆ, ಮಕ್ಕಳ ಕೌಶಲಗಳು, ಬುದ್ಧಿಮತ್ತೆ ಅಂಕಗಳಿಂದ ಗೊತ್ತಾಗುತ್ತಲ್ಲ ಎಂದರೆ, ಅದು ಎಲ್ಲರ ವಿಷಯದಲ್ಲೂ ನಿಜವಿರದೆ ಇರಬಹುದು. ಕೆಲವು ಮಕ್ಕಳು ಉರು ಹೊಡೆದು ಹೆಚ್ಚು ಅಂಕ ಗಳಿಸಬಹುದು. ಮತ್ತೆ ಕೆಲವು ಮಕ್ಕಳು ಕೌಶಲವಿದ್ದರೂ ಓದದೇ, ಕಮ್ಮಿ ಅಂಕ ಪಡೆದಿರಬಹುದು. ಹಾಗಾದರೆ, ಮಕ್ಕಳು ಏನು ಓದಬೇಕು ಎನ್ನುವುದನ್ನು ಹೇಗೆ ನಿರ್ಧರಿಸಬೇಕು? ಯಾವ ನಿರ್ಧಾರ ಒಳಿತು ಎಂದು ಹೇಗೆ ತಿಳಿಯುತ್ತದೆ? ಎನ್ನುವ ಪ್ರಶ್ನೆಗಳು ಸಹಜ.

'ಕರಿಯರ್ ಕೌನ್ಸೆಲಿಂಗ್' ಇದಕ್ಕೆ ಉತ್ತರ. ಕರಿಯರ್ ಕೌನ್ಸೆಲಿಂಗ್ ಅಲ್ಲಿ ಎರಡು ಭಾಗಗಳಿರುತ್ತವೆ. ಒಂದು, ಕೌನ್ಸೆಲರ್ ಜೊತೆ ಆಪ್ತಸಮಾಲೋಚನೆ. ಇನ್ನೊಂದು ಕರಿಯರ್ ಆಪ್ಟಿಟ್ಯೂಡ್ ಟೆಸ್ಟ್.

ಕೌನ್ಸೆಲರ್ ಭೇಟಿ ಮಾಡಿ ನಿಮ್ಮ ಮಗುವಿನ ವಿದ್ಯಾಭ್ಯಾಸದ ಕುರಿತು ನಿಮ್ಮ ಗೊಂದಲ, ಆತಂಕವನ್ನು ಚರ್ಚೆ ಮಾಡಬಹುದು. ಕೌನ್ಸೆಲರ್ ಕೂಲಂಕಷವಾಗಿ ನಿಮ್ಮ ಹಾಗೂ ನಿಮ್ಮ ಪತಿ/ಮಡದಿಯೊಡನೆ ಮಾತನಾಡಿ, ಮಗುವಿನೊಡನೆಯೂ ಮಾತನಾಡುತ್ತಾರೆ. ಮಗುವಿನ ಭವಿಷ್ಯದ ವಿದ್ಯಾಭ್ಯಾಸದ ನಿರ್ಧಾರದ ತೊಂದರೆ ಏನಿದೆ, ಎಲ್ಲಿದೆ ಎಂದು ಅರಿತು ಅವರು ಸಲಹೆಗಳನ್ನು ನೀಡುತ್ತಾರೆ. ಅವರ ಸಲಹೆಗೆ ಆಧಾರವಾಗುವಂತೆ ಕರಿಯರ್ ಆಪ್ಟಿಟ್ಯೂಡ್ ಟೆಸ್ಟ್ ಮಾಡಿಸಬಹುದು.

ಈ ಕರಿಯರ್ ಆಪ್ಟಿಟ್ಯೂಡ್ ಟೆಸ್ಟ್ ಅಲ್ಲಿ ಏನಿರುತ್ತದೆ? ಈ ಟೆಸ್ಟ್ ಅನ್ನು ಯಾರು ತೆಗೆದುಕೊಳ್ಳಬೇಕು, ಯಾವಾಗ ತೆಗೆದುಕೊಳ್ಳಬೇಕು ಎನ್ನುವುದನ್ನು ತಿಳಿಯುವುದು ಮುಖ್ಯ.

ಮಗುವಿಗಿರುವ ಕೌಶಲಗಳು, ವೃತ್ತಿಪರ ಆಸಕ್ತಿ, ಅವರ ಸಕಾರಾತ್ಮಕ ಸ್ವಭಾವ ಹಾಗೂ ಗುಣಲಕ್ಷಣಗಳನ್ನು ಈ ಕರಿಯರ್ ಆಪ್ಟಿಟ್ಯೂಡ್ ಸೈಕೊಮೆಟ್ರಿಕ್ ಟೆಸ್ಟ್‌ನಿಂದ ಕಂಡುಹಿಡಿಯಬಹುದು. ಇದು ವೈಜ್ಞಾನಿಕ ವಿಧಾನವನ್ನು ಆಧರಿಸಿದೆ. ಈ ಟೆಸ್ಟ್ ಅನ್ನು ಎಂಟನೇ ತರಗತಿ ಹಾಗೂ ಅದರ ನಂತರದ ತರಗತಿಯಲ್ಲಿರುವ ಯಾವ ವಿದ್ಯಾರ್ಥಿಯಾದರೂ ತೆಗೆದುಕೊಳ್ಳಬಹುದು. ವಿದ್ಯಾಭ್ಯಾಸದ ಯಾವ ಹಂತದಲ್ಲಾದರೂ, ಅಂದರೆ, ಹೈಸ್ಕೂಲ್, ಪಿಯುಸಿ, ಡಿಗ್ರಿ, ಪೋಸ್ಟ್ ಗ್ರಾಜುಯೇಷನ್ ಈ ಹಂತಗಳಲ್ಲಿ ತೆಗೆದುಕೊಳ್ಳಬಹುದು.

ಈ ಟೆಸ್ಟ್ ಅಲ್ಲಿ ಒಂದಷ್ಟು ಪ್ರಶ್ನೆಗಳಿರುತ್ತವೆ. ಅದಕ್ಕೆ ಎಂ.ಸಿ.ಕ್ಯೂ ಮಾದರಿಯಲ್ಲಿ ಉತ್ತರಗಳಿರುತ್ತವೆ. ಸುಮಾರು ಒಂದೂವರೆ ಗಂಟೆಯ ಟೆಸ್ಟ್. ಪ್ರಶ್ನೆಗಳು ಬರೀ ಶೈಕ್ಷಣಿಕ ವಿಷಯಕ್ಕೆ ಸೀಮಿತವಾಗಿರುವುದಿಲ್ಲ. ಅವರ ಆಸಕ್ತಿ, ಇಷ್ಟ ಕಷ್ಟಗಳು ಹಾಗೂ ಕೆಲವು ಸನ್ನಿವೇಶಗಳಲ್ಲಿ ವಿದ್ಯಾರ್ಥಿ ಏನು ಮಾಡಬಹುದು ಎಂಬ ತರ್ಕಬದ್ಧ ಪ್ರಶ್ನೆಗಳೂ ಇರುತ್ತವೆ.

ಈ ಟೆಸ್ಟ್ ತೆಗೆದುಕೊಳ್ಳಲು, ವಿದ್ಯಾರ್ಥಿಗೆ ಯಾವುದೇ ರೀತಿಯ ತಯಾರಿ ಬೇಕಿಲ್ಲ. ಪ್ರಶ್ನೆಗಳಿಗೆ ಉತ್ತರಿಸುವುದರ ಜೊತೆಗೆ ವಿದ್ಯಾರ್ಥಿ ವಿವಿಧ ವಿಷಯಗಳಲ್ಲಿ ತನಗೆ ಬಂದ ಅಂಕಗಳನ್ನು, ತನ್ನ ತರಗತಿಯ ಜೊತೆಗೆ ನಮೂದಿಸಬೇಕು. ಈಗೆಲ್ಲ ಈ ಟೆಸ್ಟ್ ಆನ್‌ಲೈನ್‌ನಲ್ಲಿ ಲಭ್ಯವಿರುತ್ತದೆ. ಟೆಸ್ಟಿನ ಆನ್‌ಲೈನ್ ಲಿಂಕ್ ಅನ್ನು ನಿಮ್ಮ ಕರಿಯರ್ ಕೌನ್ಸೆಲರ್ ಅನ್ನು ಕೇಳಿ ಪಡೆಯಿರಿ. ಈ ಟೆಸ್ಟ್‌ಗೆ ನಿಮ್ಮ ಕೌನ್ಸೆಲರ್ ಶುಲ್ಕ ಹೊರತುಪಡಿಸಿ ಪ್ರತ್ಯೇಕ ಶುಲ್ಕವಿರುತ್ತದೆ.

ಟೆಸ್ಟ್ ಮುಗಿಸಿದ ಒಂದೆರಡು ಗಂಟೆಗಳಲ್ಲಿ ನಿಮಗೆ ಕರಿಯರ್ ಆಪ್ಟಿಟ್ಯೂಡ್ ಟೆಸ್ಟ್ ಫಲಿತಾಂಶ ಸಿಗುತ್ತದೆ. ಈ ರಿಪೋರ್ಟ್ ಇಂದ ನೀವು ಮಗುವಿಗೆ ಯಾವ ವಿಷಯಗಳು ಸುಲಭ ಹಾಗೂ ಸಾಮರ್ಥ್ಯವಿದೆ, ಯಾವ ಕೌಶಲಗಳು ನೈಸರ್ಗಿಕವಾಗಿ ಬಂದಿವೆ, ಅವರ ಸಕಾರಾತ್ಮಕ ಗುಣ–ಸ್ವಭಾವಗಳೇನು ಎಂದು ತಿಳಿಯಬಹುದು. ಅದರೊಡನೆ, ಮುಂದಿನ ಹಂತದ ವಿದ್ಯಾಭ್ಯಾಸಕ್ಕೆ ಯಾವ ಸ್ಟ್ರೀಮ್ (ಸೈನ್ಸ್, ಆರ್ಟ್ಸ್, ಕಾಮರ್ಸ್) ಅಲ್ಲಿ ಯಾವ ಕೋರ್ಸ್‌ಗಳನ್ನು ಮಾಡಬಹುದು ಎಂದು ಸಹ ತಿಳಿಯಬಹುದು. ಅಷ್ಟೇ ಅಲ್ಲ, ಯಾವ ಕೋರ್ಸ್ ಮಾಡಿದರೆ ಯಾವ ರೀತಿಯ ಕೆಲಸ ಸಿಗಬಹುದು ಎಂಬುದನ್ನು ಸಹ ಈ ರಿಪೋರ್ಟ್ ಹೇಳುತ್ತದೆ.

ಈ ರಿಪೋರ್ಟ್‌ನೊಂದಿಗೆ ನಿಮ್ಮ ಕರಿಯರ್ ಕೌನ್ಸೆಲರ್ ಕೂತೆ, ನೀವು ಮತ್ತು ನಿಮ್ಮ ಮಗು ಚರ್ಚಿಸಿ. ಆ ಚರ್ಚೆಯ ಮೂಲಕ – ಯಾವ ದಾರಿ ಆಯ್ಕೆ ಮಾಡಿದರೆ ಯಾವ ರೀತಿಯ ಅವಕಾಶಗಳಿರುತ್ತವೆ ಎಂಬ ತಿಳಿವಳಿಕೆಯಿಂದ, ಸ್ಪಷ್ಟತೆಯಿಂದ ಒಂದು ಮಾಹಿತಿಪೂರ್ಣ ನಿರ್ಧಾರ (**informed decision**) ತೆಗೆದುಕೊಳ್ಳಬಹುದು. ಆಗ ನಿಮ್ಮ ಹಾಗೂ ನಿಮ್ಮ ಮಕ್ಕಳ ಗೊಂದಲ, ಆತಂಕಗಳು ಕಮ್ಮಿಯಾಗುವುದರ ಜೊತೆ, ಮಕ್ಕಳ ಭವಿಷ್ಯ ಉಜ್ವಲವಾಗುತ್ತದೆ. ನಿಮ್ಮ ಸಮಯ, ದುಡ್ಡು ಹಾಗೂ ಶ್ರಮ ವ್ಯರ್ಥವಾಗುವುದಿಲ್ಲ. ಮಕ್ಕಳು ತಮಗೆ ಆಸಕ್ತಿಯಿರುವ, ಕೌಶಲಗಳಿರುವ ವಿದ್ಯೆ ಅಥವಾ ಕೆಲಸವೆಂದಾಗ ಸ್ವಯಂಪ್ರೇರಣೆಯಿಂದ ಶ್ರಮವಹಿಸುತ್ತಾರೆ. ಈ ಎಲ್ಲದರ ಸಂಯೋಜನೆಯಿಂದ ಅವರಿಗೆ ಆನಂದ ಮತ್ತು ಯಶಸ್ಸು ಸಹ ದೊರಕುವುದು ಸುಲಭವಾಗುತ್ತದೆ.



ಪ್ರತಿಕ್ರಿಯಿಸಿ: **feedback@sudha.co.in**